ಬೀದರ್ ನಗರದ ಸುತ್ತಲಿನಲ್ಲಿ ವಾಸಿಸುವ ಜನರಿಗೆ ಬಸ್ ವ್ಯವಸ್ಥೆ

2187 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ನಗರದ 20 ಕಿ.ಮೀ.ಗಳ ಸುತ್ತಲಿನಲ್ಲಿ ವಾಸಿಸುವ ಜನರಿಗೆ ಈಗಿನ ಬಸ್ ವ್ಯವಸ್ಥೆಯು ಅನುಕೂಲವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಂತಹ ಅನುಕೂಲತೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಇಲ್ಲ

ಆ) ಅಗತ್ಯ ಸಂಖ್ಯೆಯ ಬಸ್ಸುಗಳನ್ನು ಒಡಿಸಲಾಗುತ್ತಿದೆ.

ಗ್ರಾಮಾಂತರ ಪ್ರದೇಶದ ಹಳ್ಳಿಗಳಿಗೆ ವಿದ್ಯುತ್ ಸೌಕರ್ಯ ಒದಗಿಸಿಕೊಡುವುದು

2494 - ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೃಷ್ಣರಾಜಪೇಟೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶದ ಹಳ್ಳಿಗಳ ಬಡಾವಣೆಗಳಲ್ಲಿ ವಿದ್ಯುತ್ ಸೌಕರ್ಯ ಹೊಂದಲು ನಿರ್ಬಂಧಿಸಿದೆಯೇ ಹಾಗಿದ್ದರೆ ಕಾರಣವೇನು?

ಆ) ಇತ್ತೀಚಿನ ವರ್ಷಗಳಲ್ಲಿ ನಿರ್ಮಾಣಗೊಂಡ ಹರಿಜನ ಕಾಲೋನಿ ಹಾಗೂ ದುರ್ಬಲ ವರ್ಗಗಳ ಕಾಲೋನಿಗಳಲ್ಲಿ ವಾಸಿಸುವ ಜನರ ಬೇಡಿಕೆ ಇದ್ದರೂ ಈವರೆಗೆ ವಿದ್ಯುತ್ ಸೌಕರ್ಯ ಪಡೆಯಲಾಗಿಲ್ಲ. ಅಂದರೆ ಇಲ್ಲಿ ವಾಸಿಸುವ ಜನರಿಗೆ ಇದರ ಅವಶ್ಯಕತೆ ಇಲ್ಲವೆಂದು ಸರ್ಕಾರದ ಭಾವನೆಯೇ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು)

ಅ) ಇಲ್ಲ

ಆ) ಹರಿಜನ ಕಾಲೋನಿ ಹಾಗೂ ದುರ್ಬಲ ವರ್ಗಗಳ ಕಾಲೋನಿಗಳ ವಿದ್ಯುದ್ದೀಕರಣದ ಕಾರ್ಯವನ್ನು ಮಂಡಳಿಯು ತಾನು ಹಾಕಿಕೊಂಡಿರುವ ವಾರ್ಷಕ ಗುರಿಯಂತೆ ನಿರ್ವಹಿಸುತ್ತಿರುತ್ತದೆ. ಈ ವರ್ಷ 600 ಹರಿಜನ ಬಸ್ತಿಗಳನ್ನು ವಿದ್ಯುದ್ದೀಕರಿಸಲು ಗುರಿ ಹಾಕಿಕೊಂಡಿದೆ. ಅದರಂತೆ ಕೆಲಸ ಕಾರ್ಯಗಳು ಸಾಗುತ್ತಿದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 1956ನೇ ಇಸವಿಯ ಕಂಪನಿಗಳ ಶಾಸನದ 619 (ಎ) ಕಲಮಿನ ಮೇರೆಗೆ : "1988-89ನೇ ಇಸವಿಯ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 19ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ."

ಅಧ್ಯಕ್ಷರು: ಕಾಗದ ಪತ್ರಗಳನ್ನು ಮಂಡಿಸಲಾಯಿತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಕೋಲಾರ ಜಿಲ್ಲೆ ಶ್ರೀನಿವಾಸಪುರದಲ್ಲಿ ರೈತರ ಮೇಲೆ ಹಲ್ಲೆ ನಡೆದಿದೆ, ಅಲ್ಲಿನ ರಾಜಕೀಯ ಮುಖಂಡರ ಮೇಲೆ ಧಾಳಿ ನಡೆದಿದೆ. ಸರ್ಕಾರ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಮತ್ತು ಉತ್ತರ ಕೊಡಬೇಕು. ಅಲ್ಲಿ ನಾವು ನೋಡಿದ್ದೇವೆ. ಬಹಳ ದೊಡ್ಡ ದುರಂತ ನಡೆದಿದೆ, ಅಲ್ಲಿ ಹೊಡೆದಿದ್ದಾರೆ.....

ಶ್ರೀ ಡಿ.ಬಿ. ಚಂದ್ರೇಗೌಡ : ಇವತ್ತು ಬೆಳಿಗ್ಗೆ ತಾನೆ ಪ್ರಶ್ನೋತ್ತರ ಕಾಲದಲ್ಲಿ ಬಂದಂಥ ವಿಚಾರವಿದು. ವಿದ್ಯುಚ್ಛಕ್ತಿ ಪೂರೈಕೆ ಅಸಮರ್ಪಕವಾಗಿದೆ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಅಲ್ಲಿ ಜನತೆಗೆ ತೀವ್ರವಾದ ಅನ್ಯಾಯ ಆಗಿದೆ. ಆದುದರಿಂದ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಈಶ್ವರಪ್ಪನವರೇ ಸ್ವಲ್ಪ ಸಮಾಧಾನ ಮಾಡಿಕೊಳ್ಳಿ. ಈಗ ವಿರೋಧ ಪಕ್ಷದ ನಾಯಕರನ್ನು ಕರೆದಿದ್ದೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ದಿನಾಂಕ 2-9-1991 ರಂದು ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ರೈತರ ಮೇಲೆ ಹಲ್ಲೆ ನಡೆದಿರುವ ಬಗ್ಗೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, 2ನೇ ತಾರೀಖು ಶ್ರೀನಿವಾಸಪುರದಲ್ಲಿ ರೈತರು ರಾಸಾಯನಿಕ ಗೊಬ್ಬರಗಳ ಬೆಲೆ ಏರಿಕೆ ಬಗ್ಗೆ ಮತ್ತು ಅಸಮರ್ಪಕ ವಿದ್ಯುತ್ ಪೂರೈಕೆ ಬಗ್ಗೆ ಒಂದು ಪ್ರದರ್ಶನವನ್ನು ಅಥವಾ ಪ್ರತಿಭಟನೆಯನ್ನು ಏರ್ಪಡಿಸಿದ್ದರು. ಆ ದಿವಸ ಸುಮಾರು 4-5 ಸಾವಿರ ಜನ ರೈತರು ಸೇರಿ, ಪ್ರದರ್ಶನ ಮಾಡಿ, ತಮ್ಮ ಪ್ರತಿಭಟನೆಯನ್ನು ವ್ಯಕ್ತ ಮಾಡುವುದಕ್ಕಾಗಿ, ತಹಶೀಲ್ದಾರ್‌ರವರ ಕಛೇರಿಗೆ ಹೋದರೆ, ಅವರು ಮೀಟಿಂಗ್‌ನಲ್ಲಿ ಕುಳಿತಿದ್ದರು. ಆದರೆ ಈಗ ಪತ್ರಿಕೆಗಳಲ್ಲಿ ರೈತರು, ತಹಶೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಿದರು, ಎಂದು ವರದಿ ಬಂದಿದೆ. ನಮಗೆ ಬಂದಿರತಕ್ಕ ಸುದ್ದಿ ಪ್ರಕಾರ ಇವತ್ತು ಎಲ್ಲಾ ನೌಕರರನ್ನೂ ರೈತರು ಹಿಡಿದುಕೊಂಡು ಹೊಡೆದರು, ಮಾಡಿದರು ಎಂದು ಹೇಳಿ, ಕೇಸುಗಳನ್ನು ದಾಖಲೆ ಮಾಡುವಂಥ ಸ್ಥಿತಿಗೆ ಹೋಗಿದ್ದಾರೆ. ಈಗಾಗಲೇ ಸುಮಾರು 6 ಜನ ರೈತರನ್ನು ಮೂಳೆ ಮುರಿಯವ ಹಾಗೆ ಹೊಡೆದಿದ್ದಾರೆ. ಬಹುತೇಕ ಅಲ್ಲಿರತಕ್ಕ ಜನತಾದಳದ ಅಧ್ಯಕ್ಷರು, ವಿಶೇಷವಾಗಿ ಮಂಡಲದ ಪ್ರಧಾನರು ಮತ್ತು ಹಾಲಿನ ಒಕ್ಕೂಟದ ಅಧ್ಯಕ್ಷರು, ಹೀಗೆ ಬಹಳ ಪ್ರಮುಖ ರಾಜಕೀಯ ಮುಖಂಡರ ಮೇಲೆ ಇಷ್ಟು ಅಮಾನುಷವಾದ ಹಲ್ಲೆ ನಡೆದಿದೆ. ಸರ್ಕಾರ ಇದುವರೆಗೂ ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ? ರೈತರು ಇಷ್ಟು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ಮಾಡಿದ್ದಾರೆ. ಸರ್ಕಾರ ಅಲ್ಲಿ ಏನು ನಡೆದಿದೆ ಎಂಬ ಬಗ್ಗೆ ಕನಿಷ್ಟ ಪಕ್ಷ ಒಂದು ಹೇಳಿಕೆಯನ್ನು ಸದನಕ್ಕೆ ಕೊಡದೆ ಇದ್ದರೆ, ಚರ್ಚೆಗೆ ತಾವು ಅವಕಾಶ ಕೊಡದಿದ್ದರೆ, ಇದು ಜನತಂತ್ರದ ವ್ಯವಸ್ಥೆಯ ಸರ್ಕಾರ ಅಲ್ಲ, ಪೋಲೀಸು ರಾಜ್ಯವಾಗಿದೆ. ಈ ಸರ್ಕಾರ ಪ್ರತಿಪಕ್ಷಗಳನ್ನು ಹತ್ತಿಕ್ಕುವುದಕ್ಕೆ ಈ ಪೋಲೀಸರನ್ನು ಮತ್ತು ಅಧಿಕಾರಿಗಳನ್ನು ಬಳಸಿಕೊಳ್ಳುತ್ತಿದೆ ಎನ್ನತಕ್ಕಂಥ ಅತ್ಯಂತ ಜವಾಬ್ದಾರಿಯುತವಾದ ಆಪಾದನೆಯನ್ನು ನಾನು ಮಾಡುತ್ತಿದ್ದೇನೆ. ಮಾನ್ಯ ಗೃಹಸಚಿವರೂ ಇಲ್ಲಯೇ ಇರುವುದರಿಂದ, ಈ ಬಗ್ಗೆ ಏನಾದರೂ ಒಂದು ಹೇಳಿಕೆಯನ್ನು ಕೊಡುತ್ತಾರೆಯೇ ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ನಾನು ನಿಲುವಳಿ ಸೂಚನೆಯನ್ನು ಕಳುಹಿಸಿ, ತಮ್ಮ ಕೊಠಡಿಯಲ್ಲಿ ಬಂದು ಮಾತನಾಡಿದ್ದೇನೆ. ಪ್ರಶ್ನೆ ಏನೆಂದರೆ, ನಿನ್ನೆ ದಿವಸ ಕೋಲಾರ ಜಿಲ್ಲೆ ಶ್ರೀನಿವಾಸಪುರದಲ್ಲಿ ...